# ಪತ್ರಿಕಾ ಪ್ರಕಟಣೆ

## ಕುಖ್ಯಾತ ಕೊಲೆಗಾರರ ಬಂಧನ

ದಿನಾಂಕ:04.11.2021 ರಂದು ಫಿರ್ಯಾದಿ ಶ್ರೀ ಚಂದ್ರಕಾಂತ ತಂದೆ ಸಿದ್ರಾಮಪ್ಪ ನಂದೂರ ಸಾ॥ ವಿದ್ಯಾ ನಗರ ಕಲಬುರಗಿ ಇವರು ಠಾಣೆಗೆ ಹಾಜರಾಗಿ ಲಿಖಿತ ದೂರು ಸಲ್ಲಿಸಿದ್ದರ ಸಾರಾಂಶವೇನೆಂದರೆ, ಇಂದು ದಿನಾಂಕ:04.11.2021 ರಂದು ಬೆಳಿಗ್ಗೆ 06:30 ಗಂಟೆಗೆ ನನ್ನ ಮಗ ಅಭಿಷೇಕ @ ಅಭಿಲಾಷ ನಂದೂರ ವಯ: 26 ವರ್ಷ ಉ: ವಿದ್ಯಾರ್ಥಿ ಸಾ॥ ವಿದ್ಯಾ ನಗರ ಕಲಬುರಗಿ ಇತನು ಜಿಮಗೆ ಹೋಗುವ ಕಾಲಕ್ಕೆ ಹಳೆಯ ವೈಷಮ್ಯದಿಂದ 1) ಮುರ್ತುಜಾ ಅಲಿ 2) ಸಾಗರ ಭೈರಾಮಡಗಿ 3) ಆಕಾಶ @ ಮಾಯಾ ಭೈ ಮತ್ತು 4) ಶುಭಂ ಇವರುಗಳು ಹಾಗೂ ಇತರರು ಸೇರಿಕೊಂಡು ಒಳಸಂಚು ರೂಪಿಸಿ ಕೇಂದ್ರ ಬಸ್ ನಿಲ್ದಾಣದ ಆವರಣದಲ್ಲಿ ನನ್ನ ಮಗನಿಗೆ ಮಾರಕಾಸ್ತ್ರಗಳಿಂದ ತಲವಾರ/ಮಚ್ಚುಗಳಿಂದ ಹೊಡೆದು ಭೀಕರವಾಗಿ ಕೊಲೆ ಮಾಡಿರುತ್ತಾರೆ ಅಂತ ಇತ್ಯಾದಿಯಾಗಿ ಸಲ್ಲಿಸಿದ ದೂರು ಅರ್ಜಿ ಸಾರಾಂಶದ ಮೇಲಿಂದ ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ. 136/2021 ಕಲಂ 143, 147 148, 302, 120(ಬಿ) ಸಂಗಡ 149 ಐ.ಪಿ.ಸಿ. ಮತ್ತು ಕಲಂ 3(i)(r) 3(2) (v) SC/ST Act ಪ್ರಕಾರ ಪ್ರಕರಣ ದಾಖಲಾಗಿದ್ದು ಇರುತ್ತದೆ.

ಸದರ ಪ್ರಕರಣದಲ್ಲಿ ಆರೋಪಿತರ ಪತ್ತೆಗಾಗಿ ಮಾನ್ಯ ಪೊಲೀಸ್ ಆಯುಕ್ತರು ಕಲಬುರಗಿ ನಗರ ಕಲಬುರಗಿ, ಮತ್ತು ಮಾನ್ಯ ಉಪ ಪೊಲೀಸ್ ಆಯುಕ್ತರು (ಕಾ&ಸು) ಕಲಬರಗಿ ರವರ ನಿರ್ದೇಶನದಂತೆ ಮಾನ್ಯ ಸಹಾಯಕ ಪೊಲೀಸ್ ಆಯುಕ್ತರು ದಕ್ಷಿಣ ಉಪ-ವಿಭಾಗ ಶ್ರೀ ಅಂಶುಕುಮಾರ ಐ.ಪಿ.ಎಸ್. ಇವರ ನೇತೃತ್ವದಲ್ಲಿ ಅಶೋಕ ನಗರ ಪೊಲೀಸ್ ಠಾಣೆ ಇನ್ಸಪೇಕ್ಟರ ಶ್ರೀ ಪಂಡಿತ ಸಗರ, ಮತ್ತು ಶ್ರೀ ಬಸವರಾಜ ಮಂಜಾಳಕರ ಪಿ.ಎಸ್.ಐ. ರೌಡಿ ನಿಗ್ರಹ ದಳ ಮತ್ತು ಶ್ರೀ ವಾಹೀದ ಕೋತ್ವಾಲ ಪಿ.ಎಸ್.ಐ. ಸಿ.ಇ.ಎನ್. ಠಾಣೆ ರವರನ್ನು ಮತ್ತು ಸಿಬ್ಬಂದಿಯನ್ನು ಒಳಗೊಂಡ ತಂಡವನ್ನು ರಚಿಸಿ ಆರೋಪಿತರ ಪತ್ತೆಗಾಗಿ ಜಾಲ ಬಿಸಿದ್ದು ಇಂದು ದಿನಾಂಕ:07.11.2021 ಆರೋಪಿತರು ಇರುವ ಸ್ಥಳದ ಬಗ್ಗೆ ಖಚಿತ ಮಾಹಿತಿ ಮೇರೆಗೆ ಅವರ ಮೇಲೆ ದಾಳಿಮಾಡಿ ಕೊಲೆ ಮಾಡಿದ ಮತ್ತು ಕೊಲೆ ಮಾಡಲು ಸಹಾಯ ಮಾಡಿದ ಆರೋಪಿತರಾದ 1 ಮುರ್ತುಜಾ ಅಲಿ ತಂದೆ ಮಹ್ಮದ ಅಲಿ ರೋತೆ ವಯ: 25 ವರ್ಷ ಜಾ: ಮುಸ್ಲಿಂ ಉ: ವಿದ್ಯಾರ್ಥಿ ಸಾ॥ ಮ.ನಂ. 17 ಎ ಜಮಾದಾರ ಲೇನ್ ಪೊಲೀಸ್ ಕಾಲೋನಿ ಕಲಬುರಗಿ 2. ಸಾಗರ ತಂದೆ ಮಹಾಂತೇಶ ಭೈರಾಮಡಗಿ ವಯ: 22 ವರ್ಷ ಜಾ: ಲಿಂಗಾಯತ ಉ: ವಿದ್ಯಾರ್ಥಿ ಸಾ॥ ಎಸ್.ಬಿ. ಕಾಲೇಜ ಹತ್ತಿರ ರಾಮ ನಗರ ಕಲಬುರಗಿ 3. ಆಕಾಶ @ ಆದರ್ಶ @ ಮಾಯಾ ಭೈ ತಂದೆ ಮಹಾದೇವ ಜಾಧವ ವಯ: 23 ವರ್ಷ ಜಾ: ಎಸ್.ಸಿ.(ಕೊರವ) ಉ: ಮೆಡಿಕಲ್ ಸ್ಟೋರನಲ್ಲಿ ಕೆಲಸ ಸಾ॥ ಸಿ.ಐ.ಬಿ. ಕಾಲೋನಿ ಕಲಬುರಗಿ 4. ಶುಭಂ ತಂದೆ ಅಶೋಕ ದೊಡ್ಡಮನಿ ವಯ: 23 ವರ್ಷ ಜಾ: ಎಸ್.ಸಿ(ಹೊಲೆಯ) ಉ: ವಿದ್ಯಾರ್ಥಿ ಸಾ॥ ಸಾಗನೂರ ಹಾ॥ ವ॥ ಗೋದುತಾಯಿ ನಗರ 7ನೇ ಕ್ರಾಸ್ ಕಲಬುರಗಿ 5. ಅಭಿಷೇಕ ತಂದೆ ರಾಜಕುಮಾರ ಮೂಲಭಾರತಿ ವಯ: 21 ವರ್ಷ ಉ: ವಿದ್ಯಾರ್ಥಿ ಜಾ: ಎಸ್.ಸಿ (ಹೊಲೆಯ) ಸಾ॥ ಅಮರ ಪ್ಯಾಲೇಸ ಹಿಂದುಗಡೆ ಕಲಬುರಗಿ 6. ಕೌಶಿಕ ತಂದೆ ಸೋಮಶೇಖರ ಹಳಿಮನಿ ವಯ: 20 ವರ್ಷ ಜಾ: ಲಿಂಗಾಯತ ಉ: ವಿದ್ಯಾರ್ಥಿ ಸಾ॥ ಶಾಂತಿ ನಗರ ಕಲಬುರಗಿ ಇವರುಗಳನ್ನು ಬಂಧಿಸಿ, ಸದರಿ ಆರೋಪಿತರಿಂದ ಕೊಲೆ ಮಾಡಲು ಉಪಯೋಗಿದ 4 ಮಾರಕಾಸ್ತ್ರಗಳನ್ನು 2 ದ್ವಿ-ಚಕ್ರ ವಾಹನಗಳನ್ನು ಮತ್ತು ಒಂದು ಇನ್ನೋವಾ ಕಾರನ್ನು ಜಪ್ತಿ ಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದು ಇರುತ್ತದೆ. ಈ ಕುರಿತು ಮಾನ್ಯ ಪೊಲೀಸ್ ಆಯುಕ್ತರು ಕಲಬುರಗಿ ನಗರ ರವರು ಪ್ರಸಂಶೆ ವ್ಯಕ್ತ ಪಡಿಸಿರುತ್ತಾರೆ.

Scanned with CamScanner